Dec-74
T-122

R No KKNN 12 9-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸತ್ಯವಾದಿ

ಸ್ಥಾಪಕರು: ಧರ್ಮಸ್ಥಾಪನಾನಿರತ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾಪನಾನಿರತ ಎಂ. ಎಸ್. ಕೃಷ್ಣರಾವ್ (ತಿ ಪ್ರ ಸ

ಕಾನರಗೋಡು ಬಗೆ ಸಂಧಾನ ಮಾತುಕತೆ

ಹೇಗಾದರೂ ಗೋವೆ ನಿಲ್ಲಲಿ

ನಮ್ಮ ಈ ಪವಿತ್ರ ವಿಶಾಲ ಭಾರತಭೂಮಿಯಲ್ಲಿ ಅತಿ ದೊಡ್ಡ ವಿಧಾನಮಂಡಲವನ್ನು ಹೊಂದಿರುವುದು ಉತ್ತರ ಪ್ರದೇಶವಾಗಿದೆ; ಸ್ವತಂತ್ರ ಭಾರತಕ್ಕೆ ಪ್ರಧಾನಿಗಳನ್ನು ನೀಡುವ ಮಹತ್ಕಾರ್ಯವನ್ನೂ ಅದು ಮಾಡುತ್ತಿದೆ; ಕಾಶಿ, ಪ್ರಯಾಗ, ಗಯಾ, ಮಥುರಾ ಮೊತ್ತಾದ ಮಹಾಪುಣ್ಯಕ್ಷೇತ್ರಗಳನ್ನು ಪಡೆದಿರುವ ರಾಜ್ಯವದು; ಅದು ಈಗ ಮಹಾಚುನಾವಣೆಯನ್ನೆದುರಿಸುತ್ತಿದೆ.

ಚುನಾವಣೆಯ ಕಣದಲ್ಲಿ ವಿಭಜಿತ ಕಾಂಗ್ರೆಸ್, ಸಂಸ್ಥಾ ಕಾಂಗ್ರೆಸ್, ಭಾರತೀಯ ಜನಸಂಘ, ಕಮ್ಯೂನಿಸ್ಟು ಪಾರ್ಟಿ, ಸ್ವತಂತ್ರ ಪಾರ್ಟಿ, ಮೈತ್ರಿಗಳಾದಿಗಳಿವೆ ಆಡಳಿತ ಕಾಂಗ್ರೆಸ್ ದನಕರುವನ್ನು ತನ್ನ ಚಿಹ್ನೆಯನ್ನಾಗಿ ಇಟ್ಟುಕೊಂಡಿದೆ; ಕಾನ್ಯ ಧೇನುವಿನ ಕಾರುಣ್ಯದಿಂದ ಅದು ಗದ್ದುಬಂದಿದೆಯಾದರೂ ಅದು ಗೋಹತ್ಯೆಯನ್ನು ಪ್ರತಿಬಂಧಿಸದಿದೆ ಭಾರತೀಯ ಸಂಸ್ಕೃತಿಯನ್ನು ತಳಹದಿಯನ್ನಾಗಿ ಇಟ್ಟುಕೊಂಡಿದ್ದೇವೆನ್ನುವ ಭಾರತೀಯ ಜನಸಂಘವು, ಅಲ್ಲಿ ಬಹುಮತ ಪಡೆದು ಗೆದ್ದುಬಂದರೆ ಪಶುವಧೆಯನ್ನು ಪ್ರತಿಬಂಧಿಸುವುದಾಗಿ ತನ್ನ ಘೋಷಣಾಪತ್ರದಲ್ಲಿ ಸೂಚಿಸಿರುತ್ತದೆ.

ಗೋಹತ್ಯೆಯನ್ನು ತಡೆಯುವ ಜನಾಬ್ದಾರಿ ರಾಜ್ಯ ಸರಕಾರಗಳದ್ದೆಂದು ಕೇಂದ್ರ ಸರಕಾರವು ಕೈತೊಳೆದುಕೊಳ್ಳುತ್ತ ಬಂದಿರುವುದರಿಂದ, ಪವಿತ್ರ ಕ್ಷೇತ್ರಗಳಿರುವ ಉತ್ತರ ಪ್ರದೇಶವು ಈ ಸುಸಂಧಿಯನ್ನು ಸದುಪಯೋಗಪಡಿಸಿಕೊಳ್ಳುವ ಅವಕಾಶ ಒದಗಿರುತ್ತದೆ. ಕಾನೂನು ತರುವ ಹಕ್ಕು ರಾಜ್ಯಕ್ಕೆ ಇದೆಯೇ ಎನ್ನುವ ಪ್ರಶ್ನೆಯನ್ನು ಕೆಲವರು ಎತ್ತಬಹುದು ಅಲ್ಲಿನ ಕಟ್ಟಾರ ಅತ್ಯುಚ್ಚ ನ್ಯಾಯಾಲಯಕ್ಕೆ ದಾರಿತ್ತು ಗೆದ್ದಿರುವುದನ್ನು ಅವರು ಜ್ಞಾಪಿಸಿಕೊಳ್ಳಬಹುದು ಅಂತಹ ಸಂದರ್ಭ ಬಂದರೂ ಅಲ್ಲಿ ಗೋಹತ್ಯೆಯನ್ನು ತಡೆಯುತ್ತೇವೆನ್ನುವ ಜನಸಂಘವು ಬಹುಮತ ಪಡೆದಿದ್ದರೆ ಮುಂಬರುವ ರಾಜ್ಯ ಸಭಾ ಚುನಾವಣೆಗೆ ಬಹಳ ಪ್ರಯೋಜನವಾಗುತ್ತದೆ. ರಾಜ್ಯ ವಿಷಯಗಳ ಜನಾಬ್ದಾರಿ ಇರುವುದು ರಾಜ್ಯ ಸಭೆಗಳಿಗೆನ್ನಲಾಗುತ್ತದೆ. ಹಾಗಿರುವುದರಿಂದ ಎರಡು ವರ್ಷಗಳಿಗೊಮ್ಮೆ ನಡೆಯುವ ರಾಜ್ಯ ಸಭೆಗಳ ಚುನಾವಣೆಗಳಲ್ಲಿ ಅದು ಮುಖ್ಯವಾದ ವಿಷಯವನ್ನೆ ಎತ್ತಿಲು ಸಾಧ್ಯವಾಗುತ್ತದೆ ರಾಜ್ಯ ಸಭೆಯಲ್ಲಿ ರಾಜ್ಯ ಸಭೆಯಲ್ಲಿ ಗೋಹತ್ಯೆಯನ್ನು ಪ್ರತಿಬಂಧಿಸಬೇಕೆನ್ನುವವರ ಸಂಖ್ಯೆ ಅಧಿಕವಾದ್ದರಿಂದ ದೇಶದಾದ್ಯಂತ ಆ ಕಾನೂನು ಜಾರಿಗೆ ಬರುತ್ತದೆ ಅದನ್ನು ಎಲ್ಲರೂ ನಿರೀಕ್ಷಿಸುವುದರಲ್ಲಿ ಆಶ್ಚರ್ಯವಿಲ್ಲ.

ಪಶುವಧೆಯನ್ನು ಪ್ರತಿಬಂಧಿಸುತ್ತೇವೆಂದು ಧೈರ್ಯದಿಂದ ಘೋಷಿಸುವ ಭಾರತೀಯ ಜನಸಂಘಕ್ಕೆ ಕೃತಜ್ಞತೆಗಳು.

ಈ ಕಾರ್ಯದಲ್ಲಿ ಎಲ್ಲಾ ಪಕ್ಷಗಳ ಬೆಂಬಲ ದೊರೆಯಲಿ. ಹೇಗಾದರೂ ಗೋವೆ ಬೇಗನೆ ನಿಲ್ಲಲಿ. — ಶಿವಶಂಕರ

★

ಮುನಿಸಿಪಲ್ ಪ್ರೆಸ್ ನೋಟು

ಮೈಸೂರು— ಮೂನಿಯರ್ ಹೆಲ್ತ್ ಆಫೀಸರರು ಇಟ್ಟಿರುವ ಹಾಜರೀ ಪಟ್ಟಿಗಳ, ಕಮಿಷನರ್ ಮತ್ತು ಸಂಬಂಧಪಟ್ಟ ಹೆಲ್ತ್ ಆಫೀಸರರ ತೀವ್ರ ಮತ್ತು ಅನಿರೀಕ್ಷಿತ ಚೆಕ್‌ಗಳಿಂದ ಜನವರಿ ತಿಂಗಳೊಂದರಲ್ಲೇ ರೂ 30000 ಉಳಿತಾಯವಾಗಿದೆ; ಇದನ್ನು ಪೌರಕಾರ್ಮಿಕರ ಕಲ್ಯಾಣ ಕಾರ್ಯಗಳಿಗೆ ಉಪಯೋಗಿಸಲಾಗುವುದು — ಸಂಬಳವು ಪ್ರತಿ ತಿಂಗಳಿಗಿಂತ ಜನವರಿಯಲ್ಲಿ ಹೆಚ್ಚಾಗಿದೆ.

★ ಬೊಂಬಾಯಿ— ಶಾಸನಸಭೆಯ ಬಜೆಟ್ ಅಧಿವೇಶನ ಪ್ರಾರಂಭ ದಿನವಾದ ತಾ 11 ರಂದು ಬೊಂಬಾಯಿ ಬಂದ್ ಆಚರಿಸಬೇಕೆಂದಿದ್ದ ಯೋಚನೆ ಬಿಡಲಾಗಿದೆ.

ವಿಶೇಷ ಅಂಚೆಚೀಟಿ

ನಾಗಪುರ — 1974 ರಲ್ಲಿ ಶಿವಾಜಿ ಛತ್ರಪತಿ ಮಹಾರಾಜ ಗೌರವಾರ್ಥ ವಿಶೇಷ ಅಂಚೆಚೀಟಿ ಹೊರಡಿಸಲಾಗುವುದು

●

ಕಾನರಗೋಡು

ಬೆಂಗಳೂರು— ಕಾನರಗೋಡಿನ ವೈದ್ಯ ಬಗ್ಗೆ ಶೀಘ್ರದಲ್ಲೇ ಕೇರಳ ಮತ್ತು ಕರ್ನಾಟಕ ಮುಖ್ಯಮಂತ್ರಿಗಳು ಚರ್ಚೆ ನಡೆಸಲಿರುವರೆಂದು ಸಹಕಾರ ಮಂತ್ರಿ ಶ್ರೀ ಕೆ ಹೆಚ್. ಪಾಟೀಲರು ಪತ್ರಿಕೆಯವರಿಗೆ ತಿಳಿಸಿದರು

ಡೈರಿ ರಾಜ್ಯ ಸ್ಥಾನಮಾನ

ಬೆಂಗಳೂರು— ಡೆನ್ಮಾರ್ಕ್ ಸರಕಾರದಿಂದ ಬಹುಮಾನವಾಗಿ ವಿಮಾನದಲ್ಲಿ ಬಂದ 91 ಹಸುಗಳು 6 ಗೂಳಿಗಳನ್ನು ಪಶುಸಂಗೋಪನಾ ಮಂತ್ರಿ ಶ್ರೀ ಚಿಕ್ಕೇಗೌಡರು ಸ್ವೀಕರಿಸಿದರು — ಟ್ರಕ್‌ನಲ್ಲಿ ಹೆಸರುಘಟ್ಟದ ಇಂಡೋ ಡೇನಿಷ್ ಕೃಷಿ ಕ್ಷೇತ್ರಕ್ಕೆ ಕಳುಹಿಸಲಾಯಿತು - ಅಲ್ಲಿ ಈಗ 240 ಪ್ರಾಣಿಗಳಿವೆ — ಕರ್ನಾಟಕವನ್ನು ಡೈರಿ (ಕ್ಷೀರಕ್ಷೇತ್ರಗಳ) ರಾಜ್ಯ ಮಾಡಲು ಸರಕಾರ ಅಪೇಕ್ಷೆ ಹೊಂದಿದೆ ಎಂದು ಮಂತ್ರಿಗಳವರು ಹೇಳಿದರು.

ಬೆಳೆ, ಬೆಲೆ ಗಗನಕ್ಕೇರುತ್ತಿದೆ !

ಬೊಂಬಾಯಿ— ಶುಕ್ರವಾರ ಬೆಳ್ಳಿ ಬೆಲೆ ಕಿಲೊಗ್ರಾಂಗೆ ರೂ 1007 ಇತ್ತು ! ಹೊರಕ್ಕೆ ಬೆಳ್ಳಿ ಅಕ್ರಮ ಸಾಗಾಣಿಕೆ ಹೆಚ್ಚಿದೆ.

ಗುಜರಾತು ಪರಿಸ್ಥಿತಿ

ಅಹಮದಾಬಾದು— ಮುಕ್ತೊಬ್ಬ ಸ್ಪೀಟು ಮಂತ್ರಿಯ ರಾಜೀನಾಮೆ ಮತ್ತು ಸರಕಾರಿ ನೌಕರರು ಮುಖ್ಯಮಂತ್ರಿಗಳ ವಿರುದ್ಧ ಛಳವಳಿಯಲ್ಲಿ ಸೇರಲು ನಿರ್ಧರಿಸಿರುವುದು ಉತ್ಕಟತೆಯನ್ನು ಇನ್ನೂ ಏಳಗೊಡಿಸಿದೆ — ಇದಂ ಜೊತೆಗೆ 30 ವಿದ್ಯಾರ್ಥಿಗಳು ರಾಜಭವನದ ಮುಂದೆ ಉಪವಾಸ ಕೈಗೊಂಡಿರುವರು

●

ಸ್ವರ್ಣ ಜಾತ್ರೆ

ನಾರ್ಮಗೆಲ್— ಸ್ವರ್ಣ ಭೂಗರ್ಭದಲ್ಲಿ ಸಿಗುವ ಮೊದಲಾಂಶವಾದ ಶುಕ್ರವಾರ ನಡೆದ ಪ್ರಮುಖ ಪವಿತ್ರ ಜಾತ್ರೆಗೆ 2 ಲಕ್ಷ ಜನ ಬಂದಿದ್ದರು; ಪಕ್ಕದಲ್ಲಿನ ದೇವಾಲಯವಾಗಲೀ, ವಿಗ್ರಹವಾಗಲೀ ಇಲ್ಲ. ಆದರೆ ಅಗೋಚರ ದೇವಿ ವಿಕ್ಟೊರಿಯನ ಬಗ್ಗೆ ಸಂಭಾವನೆ ಹೊಂದಿದ್ದಾರೆ — ನೂರುಗಟ್ಟಲೆ ಬಸ್ಸುಗಳ ಓಡಾಟವಿತ್ತು, 20 ಸಾವಿರ ಎತ್ತಿನ ಬಂಡಿಗಳು ಬಂದಿದ್ದವು

●

ಯೋಗಿಯ ಸಾಮರ್ಥ್ಯ

ನವದೆಹಲಿ— ಯೋಗಿ ಸತ್ಯಮೂರ್ತಿಯವರು ತಮ್ಮ ಹೃದಯ ಚಲನವನ್ನು ತಿಲ್ಲಿಸಿಕೊಂಡು ಈ ಪ್ರಯೋಗಕ್ಕಾಗಿ ಏರ್ಪಡಿಸಿದ್ದ ಗುಂಡಿಯಲ್ಲಿ 8 ದಿನಗಳಿದ್ದು ನಂತರ ತೆರೆಯಲಾದ ಗುಂಡಿಯಿಂದ ಸುಖವಾಗಿ ಬಂದನಂತರ ಹೃದಯ ಚಲನೆ ಪ್ರಾರಂಭವಾದುದು ವಿಜ್ಞಾನಿಗಳಿಗೆ ದಿಗ್ಭ್ರಮೆಗೊಳಿಸಿದೆ.

○

ಭೂಮಿಗೆ ಬಹಿರಾಕಾಶದಿಂದ ಪ್ರತಿ ವರ್ಷ 2 ಲಕ್ಷ ಟನ್ ಧೂಳು ಬೀಳುತ್ತಿರುವದೆಂದು ರಷ್ಯ ವಿಜ್ಞಾನಿಗಳ ಅಭಿಪ್ರಾಯ

★

ಟೆಂಡರ್ ಪ್ರಕಟಣೆ

ನಂ 6/ಡಿವಿ/ಎಇಟಿ/73-74

ಈ ಕೆಳಗೆ ಕಂಡ ಕೆಲಸಗಳಿಗಾಗಿ ಮೈಸೂರು ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಕಂಟ್ರಾಕ್ಟರ್‌ಗಳಿಂದ ಕೆಲಸದ ಹೆಸರು ಬರೆದ ಸರಕಾರದಲ್ಲಿ ಟೆಂಡರ್ ವಾರಧಿಕದ ಸಹಿ ಮಾಡಿದ ಮೊಹರಿನ ಟೆಂಡರ್‌ಗಳನ್ನು ವಿಧಾಯಕವಾದ ಫಾರಂನಲ್ಲಿ ದ್ವಿಪ್ರತಿಗಳಲ್ಲಿ 14-2-74 ರ ಮಧ್ಯಾಹ್ನ 4 ಗಂಟೆ ವರೆಗೆ ಆಹ್ವಾನಿಸಲಾಗಿದೆ. ಸಾಧ್ಯವಾದರೆ ಅದೇ ದಿನ ಅವುಗಳನ್ನು ಒಡೆಯಲಾಗುವುದು ಪ್ರತಿಯೊಂದರ ಮುಂದೆ ಸೂಚಿಸಿರುವಂತೆ ರೂಪಾಯಿಗಳನ್ನು ಪಾವತಿ ಮಾಡಿದಲ್ಲಿ 10-2-74 ರಿಂದ 13-2-74 ರ ವರೆಗೆ ಕೆಲಸದ ಎಲ್ಲ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಕೆ. ಆರ್. ನಗರದಲ್ಲಿರುವ, ಕೆ. ಆರ್. ನಗರ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. ಇದನ್ನು ವಾಪಸು ಮಾಡಲಾಗುವುದಿಲ್ಲ. ಅಂಚೆಯ ಮೂಲಕವಾಗಿ ಬೇಕಾದಲ್ಲಿ, ಅಂಚೆಯ ವೆಚ್ಚಕ್ಕಾಗಿ 3/- ರೂಪಾಯಿಗಳನ್ನು ಹೆಚ್ಚಾಗಿ ಮುಂಗಡವಾಗಿ ಕೊಡಬೇಕು ಅಂಚೆಯ ಮೂಲಕ ಕಳಿಸಲಾಗುವ ಟೆಂಡರ್ ಫಾರಂಗಳ ರವಾನೆಯಲ್ಲಿ ತಡವಾದಲ್ಲಿ ಹೇಗಾದರೂ ಅದರ ಜವಾಬ್ದಾರಿಯನ್ನು ಒಪ್ಪಿಕೊಳ್ಳಲಾಗುವುದಿಲ್ಲ ಮತ್ತು ಪತ್ರವ್ಯವಹಾರಕ್ಕೆ ಅವಕಾಶ ಇಲ್ಲ ಹೆಚ್ಚು ವಿವರಗಳನ್ನು ಕೆ. ಆರ್. ನಗರದಲ್ಲಿರುವ, ಕೆ. ಆರ್ ನಗರ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಪಡೆಯಬಹುದು

ಟೆಂಡರ್ ಅಂಗೀಕರಿಸಲು ಅಧಿಕಾರವುಳ್ಳ ಕಛೇರಿಯವರಿಗೆ ಯಾವುದೇ ಕಾರಣ ಕೊಡದೆ ಯಾವುದೇ ಅಥವಾ ಎಲ್ಲ ಟೆಂಡರ್‌ಗಳನ್ನು ನಿರಾಕರಿಸುವ ಹಕ್ಕು ಮೀಸಲಾಗಿದೆ

ಚಲನ್‌ಗಳ ರೂಪದಲ್ಲಿ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವುಗಳ ಬ್ಯಾಂಕ್ ಡ್ರಾಫ್ಟ್ ಈ ಮೂಲಕ ಇ ಎಂ ಡಿ ಇಲ್ಲದ ಟೆಂಡರ್‌ಗಳು ತಿರಸ್ಕರಿಸಲ್ಪಡುವುವು ನಗದು ರೂಪದಲ್ಲಿ ಅಥವಾ ಚಕ್ ರೂಪದಲ್ಲಿ ಇ ಎಂ ಡಿ ಅಂಗೀಕರಿಸಲ್ಪಡುವುದಿಲ್ಲ 1967 ಕ್ಕೆ ಮೊದಲು ತೇರ್ಗಡೆ ಆದಂಥ ಇಂಜಿನಿಯರಿಂಗ್ ಪದವೀಧರರು ಮತ್ತು ಡಿಪ್ಲೊಮಾ ಪಡೆದವರು ಇ ಎಂ ಡಿ ಪಾವತಿ ಮಾಡಬೇಕು.

ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳುವಾಗ ಟೆಂಡರ್‌ದಾರರು 1973-74 ನೇ ಸಾಲಿನ ತಮ್ಮ ರಿಜಿಸ್ಟ್ರೇಷನ್ ರಿನ್ಯೂಯಲ್ ಸರ್ಟಿಫಿಕೇಟ್‌ಅನ್ನು ಒರಿಜಿನಲ್ ನಲ್ಲಿ ಹಾಜರು ಮಾಡಬೇಕೆಂದು ಕೋರಲಾಗಿದೆ. ಹಾಜರು ಮಾಡಬೇಕಾದ ದಿನಗಳನ್ನು ಶಾಯಿನಲ್ಲಿ ಮಾತ್ರ ಮಾಡಬೇಕು

ಸೀ ನಂ – 1

ಕೆಲಸದ ಹೆಸರು – ಕೆ. ಆರ್. ನಗರ ತಾಲ್ಲೂಕಿನಲ್ಲಿ ಹಾಡ್ಯ ಗ್ರಾಮದ ಹತ್ತಿರ ಕಲ್ಲಿಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ ಮಾಡುವುದು.

ಟೆಂಡರ್‌ಗೆ ಇಟ್ಟಿರುವ ಅಂದಾಜು ದರ– ರೂ. 23200

ಟೆಂಡರ್ ಫಾರಂಗಳ ದರ – ರೂ. 10 ಮತ್ತು ಇಪಪೊಡನೆ ಮಾರಾಟ ತೆರಿಗೆ

ಇ ಎಂ ಡಿ – ರೂ. 680

ಮಳೆಗಾಲ ಬಿಟ್ಟು ಮುಗಿಸಲು ಕಾಲಾವಧಿಯ ದರತ್ತು – 10 ತಿಂಗಳುಗಳು

ಕಂಟ್ರಾಕ್ಟರ್ ವರ್ಗ – 4 ಮತ್ತು ಮೇಲ್ಪಟ್ಟು

ಸಹಿ/– ಎಸ್. ಆರ್. ಸುಬ್ಬರಾವ್,
ಎಕ್ಸಿಕ್ಯುಟೀವ್ ಇಂಜಿನಿಯರ್,
ಕೆ ಆರ್. ನಗರ ವಿಭಾಗ

ಗೋವಧೆ ನಿಶ್ಶೇಧವಾಗಲಿ

ವುಡ್‌ಲಾಂಡ್ 8 2 74 ರಿಂದ

ಅವೋಫ 5 ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಅಮಿಯಾಸ್‌ರವಂ ಹಿಂದಿ ಕಲರ್ ಮುಖೋನ್ನತ ಚಿತ್ರ

ಅ ಭಿ ಮಾ ನ'

ಪಾತ್ರ – ಅಮಿತಾಬಚ್ಚ ಜಯಬಾಮುರಿ ಡೇವಿಡ್ ಬಿಂದು

ಅ ಪೆ ರಾ 31 1 74 ರಿಂದ

ಕಸ್ತೂರಿ ನಿವಾಸ ಅವೋಫ ಕನ್ನಡ ಚಿತ್ರ

ರಾಜಕುಮಾರ್ ಜಯಂತಿ ಅಭಿನಯ

ದಿನ 3 ಪ್ರದರ್ಶನಗಳು

All India Blind Welfare Week

21 st February to 27 February 1974

Flag Day on 26 th February 1974

Donate generouly for the cause of the the Blind

Spon·ored by :

Sri Sri Bijoy Krishna Ash am Relief ociety [·eed]

Netaji Eye & General Hospital

P O. Ramachand apur Ashram, Dist· urulia (W Bengal)

ವನ್ಯಜೀವಿಗಳ ರಕ್ಷಣೆ

ಒರಿಸ್ಸಾದಲ್ಲಿ ವನ್ಯ ಮೃಗಗಳನ್ನು ಯಾರೂ ಶಿಕಾರಿ ಮಾಡಬಾರದೆಂದು ಸರಕಾರ ಆಜ್ಞೆ ಹೊರಡಿಸಿದೆ

Remember

You are quite safe in your dealings with

Bank Road Bahusar

Firm Noted for Genuine Good Business

Edited Printed and Published by Dharmapracharanirata M S. Krishna Rao (Proprietor) at the Satyavani Press, Chamarajapuram Mysore

ಚಾಮರಾಜನಗರ ಅರಣ್ಯ ವಿಭಾಗ

ಪ್ರಕಟಣೆ

ನಂ ಟಿಎಂಬಿ ಸಿಆರ್ 95/73-74

ದಿ. 17-1-1974

1974 ನೇ ಸಾಲಿನಲ್ಲಿ ಚಾಮರಾಜನಗರ ಡಿಪೋವಿಗೆ ಬೊಂಬುಗಳ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ, ಈ ಕಚೇರಿಯಲ್ಲಿ ಫಾರಂ ಒಂದಕ್ಕೆ ರೂ. 10/- (ಹತ್ತು ಮಾತ್ರ) ವಾಪಸು ಮಾಡಲಾಗದ ಈ ಹಣವನ್ನು ಪಾವತಿ ಮಾಡಿ ಪಡೆದ ವಿಧಾಯಕವಾದ ಫಾರಂನಲ್ಲಿ ಮೊಹರಾದ ಮತ್ತು ಕೆಳಗೆ ಬರೆದ ಟೆಂಡರ್‌ಗಳನ್ನು 14-2-1974 ರ ಮಧ್ಯಾಹ್ನ 4 ಗಂಟೆ ವರೆಗೆ ಈ ಕಚೇರಿಯಲ್ಲಿ ಚಾಮರಾಜನಗರದಲ್ಲಿರುವ ವಿಭಾಗ ಅರಣ್ಯ ಅಧಿಕಾರಿಯವರಿಂದ ಅಥವಾ ಅವರಿಂದ ಅಧಿಕಾರ ಪಡೆದ ಮತ್ತೊಬ್ಬ ಅಧಿಕಾರಿಯವರಿಂದ ಸ್ವೀಕರಿಸಲ್ಪಡುವುವು.

ಟೆಂಡರ್ ಫಾರಂಗಳು ಈ ಕಚೇರಿಯಲ್ಲಿ 14-2-1974 ರ ಮಧ್ಯಾಹ್ನ 2 ಗಂಟೆ ವರೆಗೆ ಕೊಡಲಾಗುವುದು.

1972-73 ನೇ ಸಾಲಿಗೆ ಕೊಡಲಾದ ವರ್ಕಿಂಗ್ ಪ್ಲಾನ್ ಮತ್ತು ಮಾರಾಟ ತೆರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟ್‌ಗಳೊಡನೆ, ಯಾವುದೇ ಷೆಡ್ಯೂಲ್ಡ್ ಬ್ಯಾಂಕಿನಿಂದ ಕೊಡಲಾದ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಅಥವಾ ಸರ್ಟಿಫೈಡ್ ಚೆಕ್ ಮೂಲಕವಾಗಿ ಅಗಲ ಗುಣ ನಿಟ್ ಒಂದಕ್ಕೆ ರೂ 1000/- (ಒಂದು ಸಾವಿರ ಮಾತ್ರ) ಇ ಎಂ ಡಿ ಯನ್ನು ಟೆಂಡರ್ ನೊಡನೆ ಪಲ್ಲಿಸಬೇಕು.

ಕೆಲಸದ ದಿನಗಳಲ್ಲಿ ಕಲಸದ ವೇಳೆಗಳಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಹೆಚ್ಚು ವಿವರಗಳಿಗಾಗಿ ವ್ಯವಹರಿಸುವುದು.

ಎಸ್. ಸಯ್ಯದ್ ಅಹ್ಮದ್.
ವಿಭಾಗ ಅರಣ್ಯಾಧಿಕಾರಿಯವರು
ಚಾಮರಾಜನಗರ.